4

# ಹೊಸ ಒಡಂಬಡಿಕೆಯಲ್ಲಿರುವ ಸ್ತ್ರೀಯರು

ಶಿಲುಬೆಯ ನಂತರ, ಆದಿ ಸಭೆಯಲ್ಲಿ ಸ್ತ್ರೀಯರ ಕುರಿತಾಗಿ ನೋಡುತ್ತೇವೆ. ಕ್ರಿಸ್ತನ ಮರಣದ ನಂತರ ಪುರುಷರಾದ ಶಿಷ್ಯಂದಿರು, ಭಯಭೀತರಾಗಿ ಅಡಗಿ ಕೊಂಡಿದ್ದಾಗ, ಸ್ತ್ರೀಯರು ಯೇಸುವಿನ ಮೇಲೆ ಇಟ್ಟಿದ್ದ ಅಭಿಮಾನದ ನಿಮಿತ್ತ, ಹೊಸ ಯುಗ ಅಂದರೆ ಕ್ರೈಸ್ತರ ಯುಗವು, ಸ್ತ್ರೀಯರಿಂದಲೇ ಪ್ರಾರಂಭವಾಯಿತು (ಇಬ್ರಿಯ 9:16, 17).

> ಹೀಗಿರುವಲ್ಲಿ ಗಲಿಲಾಯದಿಂದ ಆತನ ಸಂಗಡ ಬಂದಿದ್ದ ಸ್ತ್ರೀಯರು ಜೊತೆಯಲ್ಲಿ ಹಿಂದೆಯೇ ಹೋಗಿ ಆ ಸಮಾಧಿಯನ್ನೂ ಆತನ ದೇಹವನ್ನಿಟ್ಟ ರೀತಿಯನ್ನೂ ನೋಡಿ ಹಿಂತಿರುಗಿ ಬಂದು ಪರಿಮಳದ್ರವ್ಯಗಳನ್ನೂ ಸುಗಂಧತೈಲವನ್ನೂ ಸಿದ್ಧಮಾಡಿಕೊಂಡರು.
>
> ಆ ಸ್ತ್ರೀಯರು ಸಬ್ಬತ್‌ದಿನದಲ್ಲಿ ಧರ್ಮನಿಯಮದ ಪ್ರಕಾರ ವಿಶ್ರಮಿಸಿಕೊಂಡು.
>
> ವಾರದ ಮೊದಲನೆಯ ದಿವಸದಲ್ಲಿ ಇನ್ನೂ ಮೊಬ್ಬಿರುವಾಗ ತಾವು ಸಿದ್ಧಮಾಡಿದ ಸುಗಂಧದ್ರವ್ಯಗಳನ್ನು ತೆಗೆದುಕೊಂಡು ಸಮಾಧಿಗೆ ಬಂದರು (ಲೂಕ 23:55-24:1).

## ಸ್ತ್ರೀಯರು ಮತ್ತು ಪುನರುತ್ಥಾನವು

ಯೇಸುವಿನ ಹಿಂಬಾಲಕರಾದ ಸ್ತ್ರೀಯರು, ಯೆಹೂದ್ಯ ನಾಯಕರ ಕೋಪಕ್ಕೆ ಭಯಭೀತರಾಗಲಿಲ್ಲ. ಯೇಸು ಸ್ವಾಮಿ ಶಿಲುಬೆಯಲ್ಲಿ ಅನುಭವಿಸುತ್ತಿದ್ದ, ಸಂಕಟವನ್ನು ಮತ್ತು ಆತನ ಜೀವವು ಆತನ ದೇಹದಿಂದ ಬತ್ತಿಹೋದದನ್ನೂ ಅವರು ಗಮನಿಸಿದ್ದರು (ಮತ್ತಾಯ 27:55, 56; ಮಾರ್ಕ 15:40, 41). ಅರಿಮಥಾಯದು ಯೋಸೇಪನು ಮತ್ತು ನಿಕೋದೇಮನು ಸಮಾಧಿಯಲ್ಲಿ ಯೇಸುವನ್ನು ಇಡುವಾಗ ಪುರುಷ ಹಿಂಬಾಲಕರನ್ನು ಹೊರತುಪಡಿಸಿ, ಸ್ತ್ರೀಯರು ಮಾತ್ರ ಅವರನ್ನು ಹಿಂಬಾಲಿಸಿದ್ದರು (ಲೂಕ 23:55). ನಂತರ ಆತನ ದೇಹಕ್ಕೆ ಸುಂಗಂದ ದ್ರವ್ಯಗಳನ್ನು ಸಿದ್ಧಮಾಡಲು ಸ್ತ್ರೀಯರು ಯೆರುಸಲೇಮಿಗೆ ಹಿಂದಿರುಗಿದರು (ಲೂಕ 23:56).

ಬಹುಶಃ ಪುರುಷರು ಇನ್ನೂ ನಿದ್ರೆಯಲ್ಲಿರುವಾಗ, ನಸುಕಿನಲ್ಲಿಯೇ ಸ್ತ್ರೀಯರು ತಾವು ಪ್ರೀತಿಯಿಂದ ಸಿದ್ಧಪಡಿಸಿದ ಸುಗಂಧ ದ್ರವ್ಯವನ್ನು ತೆಗೆದುಕೊಂಡು ಯೇಸುವಿನ ದೇಹಕ್ಕೆ ಅಭಿಷೇಕಿಸಲು ಹೊರಟರು (ಮತ್ತಾಯ 28:1). ಒಂದು ವೇಳೆ ಸಮಾಧಿಯನ್ನು ಕಾಯುತ್ತಿದ್ದ ಸೈನಿಕರನ್ನು ಎದುರಿಸಬೇಕು ಎಂದು ಅವರು ಭಾವಿಸಿದ್ಧರು, ಆದರೆ ಅವರ ಆಶ್ಚರ್ಯಕ್ಕೆ ಅಲ್ಲಿ ಸೈನಿಕರು ಇರಲಿಲ್ಲ; ಅಲ್ಲಿ ಸಮಾದಿಯಕಲ್ಲು ಜರುಗಿಸಲ್ಪಟ್ಟು, ಸಮಾಧಿಯು ಬರಿದಾಗಿತ್ತು (ಲೂಕ 24:1-3).

ಪುನರುತ್ಥಾನವಾದ ಮೇಲೆ ಯೇಸು ಮೊದಲನೆಯದಾಗಿ ಪುರುಷರಿಗೆ ಕಾಣಿಸಿ ಕೊಳ್ಳದೆ, ಪಾಪಿಯಾದ ಮಗ್ದಲದ ಮರಿಯಳಿಗೆ ಕಾಣಿಸಿಕೊಂಡನು (ಯೋಹಾನ 20:11-18). ಯೇಸುವಿನ ಪುನರುತ್ಥಾನದ ಸಂದೇಶವನ್ನು ಮೊದಲನೆಯದಾಗಿ ಬಹಿರಂಗ ಪಡಿಸಿದವರು ಸ್ತ್ರೀಯರೇ (ಲೂಕ 24:9). ಆದರೆ ಸಾರ್ವಜನಿಕವಾಗಿ ಯೇಸುವಿನ ಪುನರುತ್ಥಾನದ ಸಂದೇಶವನ್ನು ಸಾರಿದವರು ಸ್ತ್ರೀಯರಲ್ಲ ಮತ್ತು ಹನ್ನೊಂದು ಜನರು, ಸಮೂಹದಿಂದಲೂ, ಜನರಿಂದಲೂ ದೂರವಾಗಿ ಅವಿತುಕೊಂಡಿರುವಾಗ, ಸ್ತ್ರೀಯರು ಅವರನ್ನು ಕಂಡು ಹಿಡಿದು ಅವರಿಗೆ ಯೇಸುವಿನ ಪುನರುತ್ಥಾನದ ವಿಷಯವನ್ನು ತಿಳಿಸಿದರು. ಪಂಚಾಶತ್ತಮ ಹಬ್ಬದ

ದಿವಸ ಪೇತ್ರನು ಯೇಸುವಿನ ಪುನರುತ್ಥಾನದ ಸಂದೇಶವನ್ನು ಪ್ರಥಮವಾಗಿ ಸಾರ್ವಜನಿಕರಿಗೆ ತಿಳಿಸಿದನು. ಆದರೆ ಅದರ ಸಂಪೂರ್ಣ ಗೌರವವು ಯಾವ ಸ್ತ್ರೀಯರು ಯೇಸುವಿನ ವಯಕ್ತಿಕವಾದ ಸೇವೆಯಲ್ಲಿ ಪಾಲ್ಗೊಂಡು, ಇಂಥ ಒಂದು ಶ್ರೇಷ್ಟ ಪುನರುತ್ಥಾನದ ಸಂದೇಶ ವನ್ನು ಪ್ರಥಮವಾಗಿ ಪ್ರಕಟಿಸಿದರೋ, ಅವರಿಗೆ ಸಂದಾಯವಾಗುತ್ತದೆ (ಅಪೊಸ್ತಲರ ಕೃತ್ಯಗಳು 2:29-32; ಲೂಕ 24:44-47ನ್ನು ನೋಡಿರಿ).

ಯೇಸುವಿನ ಸಂಕಷ್ಟ, ಮರಣ, ಹೂಣಿಡುವಿಕೆ, ಹಾಗೂ ಯೇಸುವಿನ ಪುನರುತ್ಥಾನದ ಸಂದೇಶವನ್ನು ಪ್ರಪಂಚಕ್ಕೆ ಸಾರಿದವರು ಪುರುಷರೇ ಎಂದು ಕಂಡು ಹಿಡಿಯಲಾಗಿದೆ. ಸ್ತ್ರೀಯರಲ್ಲ ಈ ಹಾದಿಯು ಪ್ರಕಟಣೆಯನ್ನೂ, ಪ್ರಸಾರವನ್ನೂ ಮತ್ತು ದೇವರ ವಾಕ್ಯದ ಸಂರಕ್ಷಣೆಯನ್ನೂ ಹಿಂಬಾಲಿಸುತ್ತದೆ. ಹೊಸ ಒಡಂಬಡಿಕೆಯು ಸ್ತ್ರೀಯರ ಮಾತುಗಳನ್ನು ಒಳಗೊಂಡಿದೆ. ಆದರೆ ಅವರು ಸಾರ್ವಜನಿಕವಾಗಿ ಬೋಧಿಸಿದ ಒಂದು ಪದವಾಗಲೀ ಅಥವಾ ಅವರು ಬರೆದ ಒಂದು ವಾಕ್ಯವಾಗಲೀ ಒಳಗೊಂಡಿರುವದಿಲ್ಲ. ಯೇಸು ಪುರುಷರನ್ನು ಅಪೊಸ್ತಲರನ್ನಾಗಿ, ಮತ್ತು ಆತನ ವಯಕ್ತಿಕ ಪ್ರತಿನಿಧಿಗಳನ್ನಾಗಿ ಆರಿಸಿಕೊಂಡನು ಮತ್ತು ಅವರು ಇತರ ಪ್ರೇರಣೆಗೊಂಡ ಪುರುಷರ ಮೂಲಕ ಹೊಸ ಒಡಂಬಡಿಕೆಯನ್ನು ಬರೆದರು. ಈ ಬರವಣಿಗೆಯಲ್ಲಿರುವ ಸತ್ಯದ ಆಧಾರದ ಮೇಲೆ ಸಭೆಯು ಕಟ್ಟಲ್ಪಟ್ಟಿದೆ (ಎಫೆಸ 2:20). ಯೇಸುವಿನ ಮರಣದ ಮುಖಾಂತರ ಉಂಟಾದ ಸುವಾರ್ತೆಯನ್ನು ಸಾರ್ವಾಜನಿಕವಾಗಿ ಲೋಕದ ಕಟ್ಟಕಡೆಯವರಿಗೂ ಸಾರಿದ ಪುರುಷರ ಕಥೆಯು ಇದಾಗಿರುತ್ತದೆ. ಇದರ ಅರ್ಥ ಸ್ತ್ರೀಯರು ಬೋಧಿಸಲಿಲ್ಲ ಎಂಬುದಾಗಿ ಅಲ್ಲ, ಎಲ್ಲಾ ದಾಖಲಾತಿಗಳ ಅನ್ವಯ ಸಾರ್ವಜನಿಕ ಪ್ರಸಾರಣೆಯು, ಪುರುಷರಿಂದಲೇ ಆಯಿತು ಎಂದು ತಿಳಿದುಕೊಳ್ಳುವದು.

ಹಳೇ ಒಡಂಬಡಿಕೆಯಲ್ಲಿ ಇದ್ದ ಹಾಗೆ, ಹೊಸ ಒಡಂಬಡಿಕೆಯಲ್ಲಿ ಜನರ ಗುಂಪಿನ ಕುರಿತಾಗಿ ಇರುವ ಅನೇಕ ಸಂಗತಿಗಳು ಪುರುಷರೇ ಎಂದು ತಿಳಿಸಲ್ಪಟ್ಟಿದೆ (ಮತ್ತಾಯ 14:21; 15:38; ಅಪೊಸ್ತಲರಕೃತ್ಯಗಳು 4:4). ವಿಧವೆಯರ ಉಪಚಾರಕ್ಕಾಗಿ ಪುರುಷರೇ ನಾಯಕತ್ವವಹಿಸಬೇಕಾಗಿತ್ತು. ಪುರುಷರಿಗೆ ಆ ಜವಾಬ್ದಾರಿಯನ್ನು ನೀಡಲಾಯಿತು (ಅಪೊಸ್ತಲರಕೃತ್ಯಗಳು 6:3). ಕೊರ್ನೇಲಿಯನ ಮೂಲಕವಾಗಿ ಅನ್ಯರಿಗೆ ರಕ್ಷಣಾ ಮಾರ್ಗವು ತೆರೆಯಲ್ಪಟ್ಟಿತು (ಅಪೊಸ್ತಲರಕೃತ್ಯಗಳು 10:11). ಅಂತಿಯೋಕ್ಯದ ಸಭೆಯಲ್ಲಿ, ಪ್ರವಾದಿಗಳೂ ಮತ್ತು ಬೋಧಕರುಗಳು ಪುರುಷರೇ ಆಗಿದ್ದರು. ಅವರ ಮೂಲಕ ಪೌಲ ಬಾರ್ನಬರು ಸುವಾರ್ತಾ ಸೇವೆಗೆ ಪ್ರತ್ಯೇಕಿಸಬೇಕೆಂದು ದೇವರ ಆತ್ಮನು ಪ್ರಕಟಿಸಿದನು (ಅಪೊಸ್ತಲರಕೃತ್ಯಗಳು 13:1, 2).

## ಸ್ತ್ರೀ ಮತ್ತು ಸಭೆಯ ಕೆಲಸ

ಸ್ತ್ರೀಯು, ಸಭೆಯ ಕೆಲಸ ಕಾರ್ಯಗಳಿಂದ ಹೊರತಾಗಿರುವದಿಲ್ಲ. ವಿಧವೆಯರಿಗಾಗಿ ವಸ್ತ್ರಗಳನ್ನು ಹೊಲಿಯುವ ಕೆಲಸವನ್ನು ದೊರ್ಕಳು ನಿರ್ವಹಿಸುತ್ತಿದ್ದಳು (ಅಪೊಸ್ತಲರಕೃತ್ಯಗಳು 9:39). ಯೋಹಾನನೆಸಿಕೊಂಡ ಮಾರ್ಕನ ತಾಯಿಯು, ಪ್ರಾರ್ಥನೆಗಾಗಿ ತನ್ನ ಮನೆಯನ್ನು ನೀಡಿದ್ದಳು (ಅಪೊಸ್ತಲರಕೃತ್ಯಗಳು 12:12). ಈ ಪ್ರಾರ್ಥನೆಯಲ್ಲಿ ಯಾರು ಯಾರು ಒಳಗೊಂಡಿದ್ದರು ಮತ್ತು ಯಾವ ವಿಧವಾಗಿ ನಡೆಯಿತು ಎಂಬ ವಿವರಣೆಗಳಿರುವದಿಲ್ಲ. ಪೌಲ, ಮತ್ತು ಅವನ ಜೊತೆಯವರು ಫಿಲಿಪ್ಪಿ ಪಟ್ಟಣದಲ್ಲಿರುವಾಗ, ಲುದ್ಯಳೆಂಬ ಆತ್ಮಿಕ ಸ್ತ್ರೀಯು, ಸುವಾರ್ತಾ ಸೇವೆಗಾಗಿ ಮತ್ತು ಪ್ರಾರ್ಥನೆಗಾಗಿ ಅವಳ ಮನೆಯಲ್ಲಿ ಅವರಿಗೆ ವ್ಯವಸ್ಥೆ ಮಾಡಿದ್ದಳು (ಅಪೊಸ್ತಲರಕೃತ್ಯಗಳು 16:15). ಬಹುಶಃ ಸಭೆಯ ಕೂಡಿಬರುವಿಕೆಗಾಗಿ ತನ್ನ ಮನೆಯಲ್ಲಿ ಅವಕಾಶ ಮಾಡಿಕೊಟ್ಟಿದ್ದಳು (ಅಪೊಸ್ತಲರಕೃತ್ಯಗಳು 16:40).

## ಸ್ತ್ರೀ ಮತ್ತು ಇತರರ ಬೋಧನೆಗಳು

ಪ್ರಿಸ್ಕಿಲ್ಲ ಎಂಬ ಸ್ತ್ರೀಯು ವಿಶೇಷ ಆಸಕ್ತಿ ಇರುವಂಥ ಸ್ತ್ರೀಯಾಗಿದ್ದಳು. ಆಕೆ ಮತ್ತು ಆಕೆಯ ಗಂಡ ಗುಡಾರಗಳನ್ನು ಮಾಡುವವರಾಗಿದ್ದರು (ಅಪೊಸ್ತಲರಕೃತ್ಯಗಳು 18:2, 3). ಅವರಿಬ್ಬರೂ ಒಟ್ಟಾಗಿ ಅಪೊಲ್ಲೋಸನಿಗೆ ದೇವರ ಮಾರ್ಗವನ್ನು ಬೋಧಿಸಿದ್ದರು (ಅಪೊಸ್ತಲರಕೃತ್ಯಗಳು 18:24-26). ಪ್ರಿಸ್ಕಿಲ್ಲಳು ಬೋಧನೆಯಲ್ಲಿ ಎಷ್ಟಾಗಿ ತನ್ನನ್ನು ತೊಡಗಿಸಿಕೊಂಡಿದ್ದಳು ಎಂದು ಸ್ಪಷ್ಟವಾಗಿರುವದಿಲ್ಲ, ಆದರೆ ಅವಳು ತನ್ನ ಗಂಡನ ಜೊತೆಗೂಡಿ ಅಪೊಲ್ಲೋಸನಿಗೆ ಬೋಧಿಸಿದಳು.

ಅಪೊಸ್ತಲರ ಕೃತ್ಯದಲ್ಲಿ ಇರುವ ಇತರೆ ವಿಚಾರಗಳಿಂದ ನಾವು ಇದನ್ನು ಈ ರೀತಿ ತೀರ್ಮಾನಿಸಬಹುದು. ಯಾರ‍್ಯಾರು ಹೆಚ್ಚು ಪರಿಚಯವಿದ್ದರು, ಯಾರ‍್ಯಾರೂ ಕ್ರಿಯೆಯಲ್ಲಿ ಪೂರ್ಣ ತೊಡಗಿಸಿಕೊಂಡಿದ್ದರು, ಅವರಲ್ಲಿ ಗಂಡಸರ ಹೆಸರನ್ನೇ ಲೂಕನು ತನ್ನ ಪುಸ್ತಕದಲ್ಲಿ ಎತ್ತಿ ಹಿಡಿದಿದ್ದಾನೆ. ಮುಂದಿನದನ್ನು ಗಮನಿಸಿರಿ: (1) ಅಪೊಸ್ತಲರ ಪಟ್ಟಿಯಲ್ಲಿ ಪೇತ್ರನ ಹೆಸರು ಪ್ರಥಮವಾಗಿ ದಾಖಲಾಗಿದೆ; ಮತ್ತು ಪ್ರಾಮುಖ್ಯತೆಗೆ ಅನುಗುಣವಾಗಿ ಇತರ ಹೆಸರುಗಳು ನಮೂದಾಗಿವೆ (ಅಪೊಸ್ತಲರಕೃತ್ಯಗಳು 1:13). (2) ಆ ಸಂದರ್ಭದಲ್ಲಿ ಪೇತ್ರನ ಕ್ರಿಯೆಗಳು ಪ್ರಮುಖವಾಗಿದ್ದರಿಂದ, ಯೋಹಾನನಿಗಿಂತ ಮೊದಲು ಅವನ ಹೆಸರನ್ನು ನಮೂದಿಸಲಾಗಿದೆ ಅಪೊಸ್ತಲರ ಕೃತ್ಯಗಳು 3:1, 3. 4, 11. ಲೂಕನ ಲೆಕ್ಕದಲ್ಲಿ ಅವನ ಹೆಸರೇ ಮೊದಲ ಸ್ಥಾನದಲ್ಲಿದೆ (ಅಪೊಸ್ತಲರಕೃತ್ಯಗಳು 4:13; 5:29; 8:14). (3) ಅನನೀಯನೆಂಬ, ಪುರುಷನ ಹೆಸರನ್ನು ಅವನ ಹೆಂಡತಿಯಾದ ಸಪ್ಫೈರಳ ಹೆಸರಿಗಿಂತ ಮೊದಲು ಬರೆಯಲಾಗಿದೆ (ಅಪೊಸ್ತಲರಕೃತ್ಯಗಳು 5:1). (4) ಅಪೊಸ್ತಲರಕೃತ್ಯಗಳು 6:5 ಲೂಕನ ಮುಂದಿನ ಚರ್ಚೆಯಲ್ಲಿರುವ ಸ್ತೆಫನನ ಹೆಸರನ್ನು ಪ್ರಥಮವಾಗಿ ನಮೂದಿಸಲಾಗಿದೆ. ನಂತರ ಫಿಲಿಪ್ಪನ ಹೆಸರು ನಂತರ ವಿಧವೆಯರನ್ನು ಪೋಷಿಸುವದಕ್ಕಾಗಿ ಇನ್ನಿತರ ಏಳುಮಂದಿಯ ಹೆಸರುಗಳನ್ನು ಮುಂದುವರಿಸಲಾಗಿದೆ. (5) ಪೌಲ ಬಾರ್ನಬರ ಸೇವಾ ಪ್ರವಾಸದಲ್ಲಿ, ಪೌಲನಿಗಿಂತ ಮೊದಲು ಬಾರ್ನಬನ ಹೆಸರನ್ನು ಸೂಚಿಸಲಾಗಿದೆ ಅಪೊಸ್ತಲರಕೃತ್ಯಗಳು 13:1, 2, 7. ನಂತರ, ಪೌಲನ ಮಾತಿನಲ್ಲಿ ಪ್ರಮುಖನಾದ್ದರಿಂದ ಬಾರ್ನಬನಿಗಿಂತ ಮೊದಲು ಪೌಲನ ಹೆಸರನ್ನು ತಿಳಿಸಲಾಗಿದೆ (ಅಪೊಸ್ತಲಕೃತ್ಯಗಳು 13:42, 46, 50). ಲಿಸ್ತ್ರದಲ್ಲಿ ಬಾರ್ನಬನು ಮುಖ್ಯ ದೇವರಾದ ದ್ಯೌಸ್‌ದೇವರೆಂತಲೂ, ಅವನ ಹೆಸರನ್ನು ಮೊದಲನೆಯದಾಗಿ ಬರೆದಿದ್ದಾರೆ (ಅಪೊಸ್ತಲರಕೃತ್ಯಗಳು 14:12, 14). ಅಪೊಸ್ತಲರಕೃತ್ಯಗಳು 15:2ರಲ್ಲಿ, ಪೌಲನ ಹೆಸರನ್ನು ಪ್ರಥಮವಾಗಿ ನಮೂದಿಸಿ, ಸಹೋದರರು ಅವನನ್ನು ಬಾರ್ನಬನ ಸಂಗಡ ಯೆರುಸಲೇಮಿಗೆ ಕಳುಹಿಸಿದರು. ಅಲ್ಲಿದ್ದವರಿಗೆ ಪೌಲನಿಗಿಂತಲೂ ಬಾರ್ನಬನು ಹೆಚ್ಚು ಪರಿಚಯವುಳ್ಳವನಾಗಿದ್ದನು (ಅಪೊಸ್ತಲರಕೃತ್ಯಗಳು 15:12, 25). ಕಾಲಾಂತರದಲ್ಲಿ ಬಾರ್ನಬನೊಂದಿಗೆ ಸೇವೆಯಲ್ಲಿ ಪೌಲನೇ ಮುಖ್ಯ ಭಾಷಣಕಾರನಾಗಿದ್ದನು. ಅಪೊಸ್ತಲರಕೃತ್ಯಗಳು 15:22, 35,ರಲ್ಲಿ ಪೌಲನ ಹೆಸರು ಪ್ರಥಮವಾಗಿದೆ. (6) ಸೀಲನ ಹೆಸರಿನ ಮೊದಲು ಪೌಲನ ಹೆಸರು ನಮೂದಿಸಲಾಗಿದೆ (ಅಪೊಸ್ತಲರಕತ್ಯಗಳು 16:19, 25, 29; 17:4, 10). (7) ತಿಮೊಥೆಯನಿಗಿಂತ ಮೊದಲು ಸೀಲನ ಹೆಸರನ್ನು ನೋಡುತ್ತೇವೆ (ಅಪೊಸ್ತಲರಕೃತಗಳು 17:14, 15; 18:5).

ಈ ಮೇಲಿನ ಸಂದರ್ಭಕ್ಕನುಗುಣವಾಗಿ, ಅಕ್ವಿಲ ಹಾಗೂ ಪ್ರಿಸ್ಕಿಲ್ಲರ ಕಾರ್ಯಗಳನ್ನು ಗುರುತಿಸಬಹುದು ಅಕ್ವಿಲನು ಪುರುಷನಾಗಿದ್ದರಿಂದ, ಲೂಕನು ಅವನನ್ನು ಪ್ರಥಮವಾಗಿ ಕಾಣಿಸಿದ್ದಾನೆ, ಯಾಕೆಂದರೆ ಅವನು ಯಜಮಾನನಾಗಿದ್ದನು (ಅಪೊಸ್ತಲರಕೃತ್ಯಗಳು 18:2). (ಅಪೊಸ್ತಲರಕೃತ್ಯಗಳು 18:18), ಇಲ್ಲಿ ಪ್ರಿಸ್ಕಿಲ್ಲಳು ಸಭೆಯಲ್ಲಿ ತನ್ನ ಗಂಡನಿಗಿಂತಲೂ ಪ್ರಸಿದ್ಧಿಯಾಗಿದ್ದರಿಂದ ಅವಳ ಹೆಸರನ್ನು ಪ್ರಥಮವಾಗಿ ಹೆಸರಿಸಲಾಗಿದೆ. ಈ ದಿನದ ಸಭೆಗಳಲ್ಲಿ ಸ್ತ್ರೀಯರು ತಮ್ಮ ಗಂಡಂದಿರಿಗಿಂತಲೂ, ಹೆಚ್ಚಾಗಿ ಎದ್ದು ಕಾಣುವವರಾಗಿದ್ದಾರೆ. ಅವಳು ಸಭೆಯಲ್ಲಿ

ಅಧಿಕಾರದಿಂದ ಇರದೆ, ಅಪೊಲ್ಲೊಸನಿಗೆ ಕ್ರಿಯಾಶೀಲವಾಗಿ ಬೋಧಿಸುವದರಲ್ಲಿ ಆಸಕ್ತಿ ಇದ್ದ ಕಾರಣದಿಂದ, ಅವಳ ಹೆಸರನ್ನು ಪ್ರಥಮವಾಗಿ[1] ತಿಳಿಸಲಾಗಿದೆ (ಅಪೊಸ್ತಲರಕೃತ್ಯಗಳು 18:26). ಅವಳು ಆ ಚರ್ಚೆಯಲ್ಲಿ ಅವಳದೇ ಅಧಿಕಾರವನ್ನು ತೋರಿಸದೆ, ಒಂದು ಗುರುತರವಾದ ಪಾತ್ರವನ್ನು ವಹಿಸಿದ್ದಳು ಎಂದು ತಿಳಿಸಲ್ಪಟ್ಟಿದೆ, ಆಕೆ ಬೋಧಿಸುವದರಲ್ಲಿ ಸೇರಿ ಕೊಂಡಿದ್ದಳು ಎಂದು ಮೂಲ ಸಾರಾಂಶವನ್ನು ಇಲ್ಲಿ ನೋಡುತ್ತೇವೆ, ಯಾಕೆಂದರೆ ಅಪೊಸ್ತಲರಕೃತ್ಯಗಳು 18:26ರಲ್ಲಿ ಅವನ ಮಾತುಗಳನ್ನು "ಪ್ರಿಸ್ಕಿಲ್ಲಳೂ ಅಕ್ವಿಲನೂ ಕೇಳಿ ಅವನನ್ನು *ತಮ್ಮ* ಮನೆಗೆ ಕರೆದುಕೊಂಡು ಹೋಗಿ ದೇವರ ಮಾರ್ಗವನ್ನು ಅವನಿಗೆ ಇನ್ನೂ ಸೂಕ್ಷ್ಮವಾಗಿ ವಿವರಿಸಿದರು ಎಂದು ತಿಳಿಸುತ್ತದೆ" (ಒತ್ತಿ ಹೇಳಿದ್ದು ನನ್ನದು). ಗ್ರೀಕ್ ಭಾಷೆಯ ಕ್ರಿಯಾಪದ "ತೆಗೆದುಕೊಂಡು" ಮತ್ತು "ವಿವರಿಸಿದರು" ಇದರಲ್ಲಿ ಬಹುಪದವನ್ನು ಉಪಯೋಗಿಸಿರುವದರಿಂದ, ಅವರಿಬ್ಬರು ಈ ಕಾರ್ಯದಲ್ಲಿ ಸೇರಿದ್ದರು ಎಂದು ತಿಳಿಸುತ್ತದೆ.

ಪ್ರಿಸ್ಕಿಲ್ಲಳು ಸಾರ್ವಜನಿಕವಾಗಿ ಬೋಧಿಸಲಿಲ್ಲ, ಅಥವಾ ಪುರುಷರ ಮೇಲೆ ಅಧಿಕಾರ ನಡೆಸಲಿಲ್ಲ, ಚರ್ಚೆಯಲ್ಲಿ ಮುಖ್ಯ ಪಾತ್ರವಹಿಸಲಿಲ್ಲ, ಅಥವಾ ಆ ಪರಿಸ್ಥಿತಿಯಲ್ಲಿ ಅಲ್ಲಿ ನಾಯಕ ಸ್ಥಾನವನ್ನು ತೆಗೆದುಕೊಳ್ಳಲಿಲ್ಲ. ಆದರೆ ಅವಳು ಅಪೊಲ್ಲೋಸನಿಗೆ ದೇವರ ವಾಕ್ಯವನ್ನು ಬೋಧಿಸುವ ಕಾರ್ಯದಲ್ಲಿ ಖಾಸಗಿಯಾಗಿ ಸಕ್ರೀಯ ಪಾತ್ರವನ್ನು ವಹಿಸಿದ್ಧಳು ಎಂದು ಲೂಕನು ಸ್ಪಷ್ಟಪಡಿಸಿದ್ದಾನೆ (ಅಪೊಸ್ತಲರಕೃತ್ಯಗಳು 18:26). ಅಪೊಲ್ಲೋಸನಿಗೆ ವಾಕ್ಯವನ್ನು ಸಾರುವದರಲ್ಲಿ ಪ್ರಿಸ್ಕಿಲ್ಲಳು ಮುಖ್ಯ ಪಾತ್ರವನ್ನು ವಹಿಸಿದ್ದಳು. ಈ ವ್ಯಕ್ತಿ ಸ್ತ್ರೀಯೇ, ಅಥವಾ ಪುರುಷನೋ ಎಂದು ಕೆಲವರು ಪ್ರಶ್ನಿಸುತ್ತಾರೆ.

## ಸ್ತ್ರೀ ಮತ್ತು ಇತರರ ಸಹಕಾರ

ಯೇಸು ಸ್ವಾಮಿಯು ವಯಕ್ತಿಕವಾದ ಸೇವೆಯನ್ನು ಮಾಡುತ್ತಿದ್ದ ಸಮಯದಲ್ಲಿ; ಯೇಸುವನ್ನು ಹಾಗೂ ಆತನ ಅಪೊಸ್ತಲರ ಸೇವೆ ಮಾಡಿದ ಸ್ತ್ರೀಯರ ಪಟ್ಟಿಯನ್ನು ಹೊಸ ಒಡಂಬಡಿಕೆಯಲ್ಲಿ ದಾಖಲುಮಾಡಲಾಗಿದೆ (ಲೂಕ 8:1-3; ಮಾರ್ಕ 15:40, 41). ಬೋಧಿ ಸುವದಕ್ಕೆ ಸ್ತ್ರೀಯರನ್ನು ತನ್ನ ಜೊತೆಯಲ್ಲಾಗಲೀ, ಅಥವಾ ಅಪೊಸ್ತಲರ ಜೊತೆಯಲ್ಲಾಗಲೀ ಆತನು ಕಳುಹಿಸದೆ ಇದ್ದರೂ ಸಹ, ಸ್ತ್ರೀಯರಿಗೆ ಈ ಸ್ಥಾನವನ್ನು ನೀಡಲಿಲ್ಲವೆಂದು, ಯೇಸುವನ್ನು ಯಾರೂ ನಿಂದಿಸಲಿಲ್ಲ. ಅನೇಕ ಸ್ತ್ರೀಯರು ಪೌಲನ ಸೇವೆಯಲ್ಲಿ ಭಾಗಿಗಳಾ ಗಿದ್ದರೂ ಸಹ, ಪೌಲನು ಸ್ತ್ರೀಯರ ವಿರೋಧಿಯೆಂದು, ಅವರ ಗೌರವಕ್ಕೆ ದಕ್ಕೆ ತಂದಿರುವನೆಂದು ಅವನನ್ನು ಜನರು ಹಿಯಾಳಿಸಿ ಮಾತನಾಡಿದರು.

ಪೌಲನ ಸಂಗಡ ಸೇವೆಯಲ್ಲಿ ಪ್ರಯಾಣ ಮಾಡಿದ ಪುರುಷರ ಹೆಸರಿನ ಪಟ್ಟಿಯನ್ನು ಲೂಕನು ತಿಳಿಸಿದ್ದಾನೆ. ಅದರಲ್ಲಿ ಬಾರ್ನಬ ಮತ್ತು ಯೋಹಾನನೆಂಬ ಮಾರ್ಕನು (ಅಪೊಸ್ತಲರಕೃತ್ಯಗಳು 13:2-5), ಸೀಲನು (ಅಪೊಸ್ತಲರಕೃತ್ಯಗಳು 15:40ಃ), ತಿಮೊಥೆ (ಅಪೊಸ್ತಲರಕೃತ್ಯಗಳು 16:1-3), ಅಕ್ವಿಲಾ (ಅಪೊಸ್ತಲರಕೃತ್ಯಗಳು 18:18), ಎರಾಸ್ಟಸನು (ಅಪೊಸ್ತಲರಕೃತ್ಯಗಳು 19:22), ಸೊಪತ್ರನೂ, ಅರಿಸ್ತಾರ್ಕನೂ, ಸೆಕುಂದನೂ, ಗಾಯನೂ, ತುಖಿಕನೂ, ಮತ್ತು ತ್ರೊಫಿಮನೂ (ಅಪೊಸ್ತಲರಕೃತ್ಯಗಳು 20:4). ಆದರೂ ಸ್ತ್ರೀಯಾದ ಪ್ರಿಸ್ಕಿಲ್ಲಳ ಹೆಸರನ್ನೂ ಈ ಪಟ್ಟಿಯಲ್ಲಿ ಸೇರಿಸಲಾಗಿದೆ (ಅಪೊಸ್ತಲರಕೃತ್ಯಗಳು 18:18). ಪುರುಷರನ್ನು ಮಾತ್ರ ಪೌಲನು ತನ್ನ ಸೇವಾ ಪ್ರಯಾಣದಲ್ಲಿ ತೆಗೆದುಕೊಂಡು ಹೋದನು ಎಂದು ತಿಳಿಯುವುದಾದರೆ, ಪ್ರಿಸ್ಕಿಲ್ಲಳೂ ತನ್ನ ಗಂಡನ ಜೊತೆಯಲ್ಲಿಯೇ ಇದ್ದ ಕಾರಣದಿಂದ, ಅವಳನ್ನೂ ಕರಕೊಂಡು ಹೋದನು ಎಂದು ತಿಳಿಯಬೇಕು.

ಪೌಲನ ಬರವಣಿಗೆಯ ಪರಿಶೀಲನೆ ಮಾಡಿದಾಗ ಹೇಗೂ ಪೌಲನ ದೇವರ ಸೇವೆಯಲ್ಲಿ, ಸ್ತ್ರೀಯರೂ ಸಹ ಸಹಕರಿಸಿದರು ಎಂದು ಪ್ರಕಟವಾಗುತ್ತದೆ. ಯಾವ ವಿಧದಲ್ಲಿ ಸ್ತ್ರೀಯರು ಸಹಕರಿಸಿದರು, ಅವರು ಅವನ ಬೋಧನೆಗೆ ವಿರುದ್ಧವಾದ ವಿಚಾರಗಳಲ್ಲಿ ತಲ್ಲೀನರಾಗಲಿಲ್ಲ ಎಂದು ಊಹಿಸಿಕೊಳ್ಳಬೇಕು.

ಪೌಲನಿಗಾಗಿ, ಪ್ರಿಸ್ಕಿಲ್ಲಳು, ತನ್ನ ಗಂಡನ ಜೊತೆಯಲ್ಲಿ ಹಿಂಸೆಯನ್ನು ಅನುಭವಿಸಿದಳು (ರೋಮಾಪುರ 16:4). ಮರಿಯಳು (ರೋಮಾಪುರ 16:6), ಯೂನ್ಯ (ರೋಮಾಪುರ 16:7). ತ್ರುಫೈನಳು ತ್ರುಫೋಸಳು, ಪೆರ್ಸಿಸಳು (ರೋಮಾಪುರ 16:12), ಯೂಲ್ಯಳು, (ರೋಮಾಪುರ 16:15) ನೇರ್ಯನ ತಂಗಿ (ರೋಮಾಪುರ 16:15), ಹಾಗೂ ರೋಮಾಪುರದಲ್ಲಿದ್ದ ಇತರೆ ಸ್ತ್ರೀಯರುಗಳು ಸಹ ಪೌಲನೊಂದಿಗೆ ಶ್ರಮೆಯನ್ನು ಅನುಭವಿಸಿರಬಹುದು. ಅವನ ಜೊತೆಯಲ್ಲಿ (ಫಿಲಿಪ್ಪಿ 4:2, 3) ಸೇವೆ ಸಲ್ಲಿಸಿದ ಸಂತುಕೆ ಹಾಗೂ ಯುವೊದ್ಯಳನ್ನು ಒಳಗೊಂಡು, ಇನ್ನೂ ಇತರ ಸ್ತ್ರೀಯರಿಗೆ ಸಹಾಯವನ್ನು ನೀಡಬೇಕೆಂದು ಪೌಲನು ವಿನಂತಿಸಿದನು, ಮತ್ತು ಪೌಲನು ನುಂಫಳ ಕುರಿತು (ಕೆಲವು ಬರವಣಿಗೆಗಳಲ್ಲಿ, ಪುರುಷನ ಹೆಸರು ಎಂಬುದಾಗಿದೆ) ಆಕೆಯು, ಸಭೆ ಕೂಡಿ ಬರುವಿಕೆಗಾಗಿ, ತನ್ನ ಮನೆಯನ್ನು ತೆರೆದಿದ್ದಳು ಎಂದು ತಿಳಿಸಲಾಗಿದೆ (ಕೊಲಸ್ಸೆ 4:15).

ಕೆಲವರು ತಿಳಿದ ಹಾಗೆ, ಪೌಲನು ಸ್ತ್ರೀ ದ್ವೇಷಿಯಾಗಿರದೆ, ಅವರ ಕುರಿತಾಗಿ ಇದ್ದ ಸಣ್ಣ ಮನೋಭಾವನೆಯನ್ನು ಬದಿಗಿಟ್ಟು, ಅವರನ್ನು ಸೇರಿಸಿಕೊಂಡು ದೇವರ ಸೇವೆ ಯನ್ನು ಮಾಡಿದನು. ಅವರಿಗೆ ವಯಕ್ತಿಕವಾದ ವಂದನೆಗಳನ್ನು ಸಹ ಪ್ರೀತಿಯಿಂದ ತಿಳಿಸಿದನು. ಸ್ತ್ರೀಯರಿಗೆ ದೇವರು ಅನುಗ್ರಹಿಸಿದ ಸೇವಾ ಕಾರ್ಯಗಳನ್ನು ಮಾಡದಂತೆ ಪೌಲನು ತಡೆಹಿಡಿದನು ಎಂದು ಹೇಳುವುದು ತಪ್ಪಾಗುತ್ತದೆ.

ಪೌಲನೊಂದಿಗೆ ಕ್ರಿಸ್ತನ ಸೇವೆಯಲ್ಲಿ ಸಹಕರಿಸಿದ ಸ್ತ್ರೀಯರು; ಶೂರರು ಮತ್ತು ಬಲವುಳ್ಳವರು ಆಗಿದ್ದರು. ಸುವಾರ್ತಾ ಪ್ರಸಾರಣೆಯಲ್ಲಿ ಪೌಲನೊಂದಿಗೆ, ಅವರು ಸಹಭಾಗಿಗ ಳಾಗಿದ್ದರು. ಇದು ಸತ್ಯ ಸಂಗತಿಯಾಗಿದ್ದರೂ ಸಹ, ದೇವರ ಕೆಲಸದಲ್ಲಿಯೂ, ಸಭೆಯ ಆರಾಧನೆಯಲ್ಲಿಯೂ, ಅವರು ಅಧಿಕಾರವನ್ನು ಚಲಾಯಿಸಬಹುದು ಎಂದು ತೀರ್ಮಾನ ಮಾಡಬಾರದು.

## ಮುಕ್ತಾಯ

ದೇವ ಭಕ್ತೆಯರಾದ ಸ್ತ್ರೀಯರು, ಬೈಬಲಿನಲ್ಲಿ ಪ್ರಾಮುಖ್ಯತೆಯನ್ನು ಹೊಂದಿದ್ದರು. ತಮ್ಮ ಕುಟುಂಬದ ಹಾಗೂ ಇತರರ ಕೊರತೆಗಳನ್ನು ಪೂರೈಸುವುದರಲ್ಲಿ ಸ್ತ್ರೀಯರು ಯೋಗ್ಯರಾದ ದೇವರ ಸೇವಕಿಯರಾಗಿದ್ದಾರೆ. ಅವರು ದೇವರ ವಾಕ್ಯವನ್ನು ಸರಿಯಾದ ಸ್ಥಳದಲ್ಲಿ ಮತ್ತು ಸರಿಯಾದ ಸಮಯದಲ್ಲಿ ತಿಳಿಸಬಹುದಾಗಿದೆ, ಆದರೆ ಅವರಿಗೆ ಪುರುಷರ ಮೇಲೆ ಅಧಿಕಾರ ನೀಡಿರುವದಿಲ್ಲ. ಕುಟುಂಬದ ಹಾಗೂ ಧಾರ್ಮಿಕ ನಾಯಕತ್ವವನ್ನು ಪುರುಷರಿಗೆ ಮಾತ್ರ ನೀಡಲಾಗಿದೆ. ಈ ರೀತಿಯಾಗಿ ದೇವರು ಪುರುಷನ ಪಾತ್ರ ಹಾಗೂ ಸ್ತ್ರಿಯರ ಪಾತ್ರವನ್ನು ವಿಭಿನ್ನವಾಗಿ ನಿರೂಪಿಸಿದ್ದಾನೆ ಎಂದು ಕೆಲವರು ಹೇಳುವುದಾದರೂ, ಇದು ಖಾಸಗಿಯ ಕೆಲಸವಾಗಿ ಸ್ತ್ರೀಯರು ಸಾರ್ವಜನಿಕ ಆರಾಧನೆಯಲ್ಲಿ ನಾಯಕತ್ವವನ್ನು ವಹಿಸಬೇಕು ಎಂದು ಸಲಹೆಯನ್ನು ನೀಡಿರುವದಿಲ್ಲ.

---

## ಫೊಯಿಬೆಯು ಸಭಾ ಸೇವಕಿಯಾಗಿದ್ದಳೇ?

ಫೊಯಿಬೆಗೆ ಪೌಲನು ವಂದನೆಗಳನ್ನು ತಿಳಿಸಿರುವದರಿಂದ, ಅವಳು ಸೇವಕಿ, ಸುವಾ ರ್ತಿಕಳು, ಅಥವಾ ಸಭಾ ಸೇವಕಿಯಾಗಿದ್ದಳೂ ಎಂದು ಕೆಲವರು ಚರ್ಚಿಸುತ್ತಾರೆ (ರೋಮಾಪುರ 16:1, 2). ಕೆಲವರು ಈ ಕಾರಣವನ್ನು ಉಪಯೋಗಿಸಿಕೊಂಡು, ಸ್ತ್ರೀಯರಿಗೆ ಆದಿಸಭೆಯಲ್ಲಿ ನಾಯಕಸ್ಥಾನವನ್ನು ನೀಡಲಾಗಿತ್ತು ಎಂದು ಪ್ರತಿಪಾದಿಸುತ್ತಾರೆ. ಕೆಲವರು ಈ ಚಿಕ್ಕ ಬುನಾದಿಯ ಮೇಲೆ ವ್ಯಾಜ್ಯವನ್ನು ಕಟ್ಟುತ್ತಾರೆ. ಒಂದು ವೇಳೆ ಈ ರೀತಿಯ ಅಂದರೆ, "ಸಭಾಸೇವಕಿಯ" ವ್ಯವಸ್ಥೆಯು ಆದಿ ಸಭೆಯಲ್ಲಿ ಇದ್ದಿದ್ದರೆ, ದೇವರ ಸಭೆಗೆ ಈ ಒಂದು ಯೋಗ್ಯತೆಯೂ ಸಾಕಾಗಿರುತ್ತಿತ್ತೋ ಫೊಯಿಬೆಯು ಉತ್ತಮವಾದ ಆಡಳಿತ ನೀಡಿರುವದರಿಂದ,

ಅವಳಿಗೆ ಪುರುಷರ ಮೇಲೆ ದೊರೆತನ ಮಾಡುವ ಹಕ್ಕು ಇರುತ್ತದೋ?

ರೋಮಾಪುರ 16ರಲ್ಲಿ ಫೊಯಿಬೆಯು ಯಾವ ವಿಧವಾದ ಸೇವೆಯನ್ನು ಮಾಡುತ್ತಿದ್ದಳು ಎಂದು ನಿರ್ದಿಷ್ಟವಾಗಿ ಹೇಳಿರುವದಿಲ್ಲ. ದೊರ್ಕಳಹಾಗೆ ಬಟ್ಟೆಯನ್ನು ಹೊಲಿಯುತ್ತಿದ್ದಳೋ ಅಥವಾ ಸಭೆಗೆ ಪ್ರಸಂಗ ಮಾಡಿದಳೋ? ನುಂಪಳಂತೆ ಮನೆಯಲ್ಲಿ ಸಭೆ ನಡೆಸುವದಕ್ಕೆ ಅವಕಾಶ ನೀಡಿದಳೋ? ಪ್ರಿಸ್ಕಿಲ್ಲಳ ಹಾಗೆ ತನ್ನ ಗಂಡನೊಂದಿಗೆ ಕೆಲಸ ಮಾಡಿದಳೋ? ಅಥವಾ ಹಾಡುಗಳನ್ನು ಹಾಡಿಸುವ ನಾಯಕಳಾಗಿದ್ದಳೋ? ಅವಳು ಸ್ತ್ರೀಯರಿಗೆ ಬೈಬಲ್ ಅಧ್ಯಾಯನ ತೆಗೆದುಕೊಂಡಳೋ, ಅಥವಾ ಪುರುಷರಿಗೆ ಬೋಧಿಸಿದಳೋ? ಸಭೆಯಲ್ಲಿ ಕೊರತೆಯಿರುವವರಿಗೆ ಆಹಾರವನ್ನು ಸಿದ್ಧಪಡಿಸಿ ನೀಡಿದಳೋ ಅಥವಾ ಯೆರುಸಲೇಮಿನ ಬಡವರಿಗೆ ಸಹಾಯ ಮಾಡಿದ ಏಳು ಜನರಂತೆ ಬಡವರ ಮೇಲ್ವಿಚಾರಣೆ ಮಾಡಿದಳೋ? ಪುರುಷರ ಮೇಲೆ ದೊರೆತನ ಮಾಡುವ ಯಾವುದೇ ಅಧಿಕಾರವನ್ನು ಚಲಾಯಿಸಿದಳೋ? ಈಕೆಯ ಸೇವೆಯ ಕುರಿತಾಗಿ ಬೈಬಲಿನಲ್ಲಿರುವ ಇತರ ವಾಕ್ಯಗಳ ಸಹಾಯವೂ ನಮಗೆ ಅವಶ್ಯವುಂಟು.

ರೋಮಾಪುರ 16:1ರಲ್ಲಿ ಫೊಯಿಬೆಯ ಕುರಿತಾದ ಒಂದು ಪದವು ಉಪಯೋಗಿಸಲ್ಪಟ್ಟಿದೆ. *ಡಯೋಕೋನನ್* ಆಡಳಿತ ಹಾಗೂ ಕುರುಬರ ಸೇವೆಯನ್ನು ಈಗಾಗಲೇ ಸಭಾಹಿರಿಯರಿಗೆ ನೀಡಿರುವದರಿಂದ, ಇದರ ಅರ್ಥವನ್ನು ಈ ಪದದಲ್ಲಿ ಕಾಣುವದಿಲ್ಲ (ಅಪೊಸ್ತಲಕೃತ್ಯಗಳು 20:28; 1 ಪೇತ್ರ 5:1, 2); ಮತ್ತು ಸಭೆ ಹಾಗೂ ಸಭಿಕರ ವಿಷಯದಲ್ಲಿ ಯಾವುದೇ ನಿರ್ಧಾರವನ್ನು ಸ್ತ್ರೀಯರು ಮಾಡುವಂತಿಲ್ಲ. ದೇವರು ನೇಮಿಸಿರುವ ಮೇಲ್ವಿಚಾರಕರು (ಹಿರಿಯರು, ಸಭಾಪಾಲಕರು, ಸಭಾನಾಯಕರು ಎಂದು ಸಹ ಇವರು ಕರೆಯಲ್ಪಟ್ಟಿದ್ದಾರೆ) - ಮಾತ್ರ ಸಭೆಯನ್ನು ಮುಂದೆಯನ್ನು ಮುನ್ನಡಿಸಿ, ಕುರುಬರ ಪಾತ್ರವನ್ನು ನಿರ್ವಹಿಸಬೇಕು. ಅವರು ತಮ್ಮ ಕುರಿಗಳಿಗಾಗಿ ನಿರ್ದಾರವನ್ನು ತೆಗೆದುಕೊಂಡು ಅವರ ಒಳಿತನ್ನು ಗಮನಿಸ ಬೇಕು. ಕುರುಬರು, ಅವರ ಕುರಿಗಳ ಕುರಿತು ನಿರ್ಧರಸಿ ಅವರನ್ನು ನಡಿಸುತ್ತಾರೆ. ಅವರು ಕುರಿಯ ಮುಂದೆ ಇದ್ದು, ಕುರಿಗಳು ಯಾವ ದಾರಿಯಲ್ಲಿ ಹೋಗಬೇಕು ಎಂದು ತಿಳಿದು, ಮುಖ್ಯ ಕುರುಬನ ಚಿತ್ತದಂತೆ ಮುನ್ನೆಡುಸುತ್ತಾರೆ (1 ಪೇತ್ರ 5:4). ಈ ನಾಯಕತ್ವವು, ಏಕಪತ್ನಿಯನ್ನು ಹೊಂದಿರುವಂತಹ ಹಿರಿಯರಿಗೆ ನೀಡಲಾಗಿರುವ ಸೂಚನೆಯಾಗಿರುತ್ತದೆ (1 ತಿಮೊಥೆ 3:2).

ಹೊಸ ಒಡಂಬಡಿಕೆಯಲ್ಲಿ *ಡಯೋಕೋನನ್* ಎಂಬ ಪದವನ್ನು ತಾಂತ್ರೀಕತೆಯ ಮತ್ತು ಅ ತಾಂತ್ರಿಕತೆಯ ಯೋಚನೆಯಿಂದ ಉಪಯೋಗಿಸಲಾಗಿದೆ. ಅದೇ ರೀತಿ ಯಲ್ಲಿ "ಹಿರಿಯರು," "ಅಪೊಸ್ತಲರು" ಎಂಬ ಇನ್ನಿತರ ಪದಗಳನ್ನು ಸಹ ಉಪಯೋಗಿ ಸಲಾಗಿದೆ. ಹೊಸ ಒಡಂಬಡಿಕೆಯ ನಿರ್ದಿಷ್ಟವಾದ ಕಾರ್ಯಕ್ಕೆ ಮೂರು ಸಾರಿ "ಸಭಾ ಸೇವಕ" (ಡೀಕನ್) ಎಂಬ ಪದವನ್ನು ಉಪಯೋಗಿಸಲಾಗಿದೆ (ಫಿಲಿಪ್ಪಿ 1:1; 1 ತಿಮೊಥೆ 3:8, 12). ರೋಮಾಪುರ 16:1ರಲ್ಲಿ ತಿಳಿಸಿರುವ ವಿಶೇಷ ಸೇವೆಗಾಗಿ ಸುಮಾರು ನಾಲ್ಕು ಸಾರಿ ಈ ಪದವನ್ನು ಉಪಯೋಗಿಸಿರಬಹುದು. ಇಲ್ಲದೆ ಹೋದರೆ "ಸೇವೆ" ಎಂಬ ಪದವು ಅತಾಂತ್ರಿಕವಾಗಿ ಇಪ್ಪತ್ತೇಳು ಸಾರಿ ಉಪಯೋಗಿಸಲಾಗಿದೆ. "ಸೇವೆ" ಎಂಬುದರ ಕ್ರಿಯಾಪದ "ಸೇವೆ ಮಾಡುವದಕ್ಕೆ" ಅಂದರೆ *ಡಯಾಕೊನಿಯೋ* ಎಂಬುದರ ಅರ್ಥವಾಗಿದೆ. ಮತ್ತು "ಉಪಚಾರ" ಮಾಡು ಎಂಬುದಾಗಿದೆ. ಈ ಪದವನ್ನು ಮೂವತ್ತಾರು ಸಾರಿ ಉಪಯೋಗಿಸಲಾಗಿದೆ. ಇದರಲ್ಲಿ ಎರಡು ಪದಗಳು ಮಾತ್ರ ಸಭಾಸೇವೆಯ ಪದಕ್ಕೆ ಮೀಸಲಾಗಿದೆ. ಆದುದರಿಂದ *ಡಯಾಕೋನಿಸ್* ಎಂಬ ಪದವು, ಫೊಯಿಬೆಯು ಯಾವುದೇ ವಿಧವಾದ ಅಧಿಕಾರದ ಸ್ಥಾನವನ್ನು ಹೊಂದಿರಲಿಲ್ಲ ಎಂದು ಸಿದ್ದಾಂತ ಪಡಿಸುತ್ತದೆ. ಆದರೆ ಈ ಪದವನ್ನು ಪೌಲನಿಗೆ (ಎಫೆಸ 3:7; ಕೊಲೊಸ್ಸೆ 1:23, 25), ತುಖಿಕನು (ಎಫೆಸ 6:21; ಕೊಲೊಸ್ಸೆ 4:7), ಎಪಫ್ರನು (ಕೊಲೊಸ್ಸೆ 1:7), ಮತ್ತು ತಿಮೊಥೆಯರು (1 ಥೆಸಲೋನಿಕ 3:2; 1 ತಿಮೊಥೆ 4:6) ಮಾತ್ರ ಸಭಾಸೇವಕರಾಗಿದ್ದರು ಎಂದು ಸಿದ್ದಾಂತ ಪಡಿಸಿರುತ್ತದೆ.

ಮೇಲ್ವಿಚಾರಕರೂ, ಹಾಗೂ ಮಹಾಸಭಾಪಾಲಕರ ಆಡಳಿತದ ಜೊತೆಯಲ್ಲಿ *ಡಯಾಕೊನೋಸ್* "ಸಭಾಸೇವಕರು" ಎಂಬ ಪದವನ್ನು ಉಪಯೋಗಿಸಲಾಗಿದೆ (ಫಿಲಿಪ್ಪಿ 1:1; 1 ತಿಮೊಥೆ 3:1, 8), ಸಭಾಸೇವಕರಿಗಿದ್ದಂತ ಜವಾಬ್ದಾರಿಯನ್ನೇ, ಮೇಲ್ವಿ ಚಾರಕರಿಗೂ ನೀಡಲಾಗಿರಲಿಲ್ಲ. ಅದರಂತೆಯೇ, ಅದರ ಅರ್ಥ "ಇನ್ನೊಬ್ಬರ ಅಧಿಕಾರದಡಿಯಲ್ಲಿರುವ ವಯಕ್ತಿಕ ಸೇವೆ" ಎಂಬುದಾಗಿ "ಮೇಲ್ವಿಚಾರಕರು ಇವರಿಗೆ ಕರ್ತವ್ಯಗಳನ್ನು ವಹಿಸಿದ್ದರು ಎಂದು ಸೂಚಿಸುತ್ತದೆ." ಈ ರೀತಿ ಸೇವೆಮಾಡುವವರು (1 ತಿಮೊಥೆ 3:8-13). ಗೌರವಾನ್ವಿತರೂ, ಒಪ್ಪಿಸಿಕೊಟ್ಟಂತಹ, ಯೋಗ್ಯರಾದ ಪುರುಷರಾಗಿರಬೇಕಿತ್ತು.

(ಅಪೊಸ್ತಲರಕೃತ್ಯಗಳು 6:1-6) ವಿಧವೆಯರ ಸೇವೆಗಾಗಿ ಆರಿಸಲ್ಪಟ್ಟ ಏಳು ಜನರು "ಸಭಾಸೇವಕರಾಗಿಲ್ಲದೆ" ಇರಬಹುದು *ಡಯಾಕೋನಿಯಾ* ಎಂಬ ಸ್ತ್ರೀಯರಿಗಾಗಿ ನಿಯಮಿತವಾದ ಪದವನ್ನು ಪುರುಷರ ಕೆಲಸಕ್ಕೆ ಉಪಯೋಗಿಸಲಾಗಿದೆ. *ಡಯಾಕೋನಸ್* ಎಂಬ ಪುರುಷಾರ್ಥಕ್ಕೆ ಉಪಯೋಗಿಸುವ ಈ ಪದವು ಇನ್ನುಳಿದ ಎಲ್ಲಾ ವಿಷಯಗಳಿಗೆ ಸನ್ನಿಹಿತವಾಗಿದೆ.

ಸಭಾ ಸೇವೆಯ ನಿರ್ವಹಣೆಗೆ *ಡಯಾಕೋನಸ್* ಎಂಬ ಪದವನ್ನು ಉಪಯೋಗಿಸದೇ ಇರುವದರಿಂದ, ಇವರು ಇನ್ನೊಬ್ಬರ ಅಧಿಕಾರಕ್ಕೆ ಒಳಪಟ್ಟವರು ಎಂದು ತಿಳಿಯಬೇಕು. ಆದುದರಿಂದ, ಸಭಾಸೇವೆಯ ಹಿನ್ನೆಲೆಯ ಅರ್ಥವನ್ನು ತಿಳಿಯಬಯಸುವುದಾದರೆ ಇದರ ಪ್ರಯೋಗವನ್ನು ಅತಾಂತ್ರಿಕ ಎಂದು ಪರಿಗಣಿಸಬೇಕು.

ರೋಮಾಪುರ 16:1ರಲ್ಲಿ ಇರುವ *ಡಯೋಕೊನಸ್* ಎಂಬ ಪದದಲ್ಲಿ ಫೊಯಿಬೆಯ ಕುರಿತಾದ ಸಮಸ್ಯೆಯು ಉದ್ಭವಿಸುತ್ತದೆ. ಅದರ ಹಿನ್ನೆಲೆಯನ್ನು ಗಮನಿಸುವಾಗ, ಅದು ತೀರ್ಮಾನ ಮಾಡುವದು ಅಸಾಧ್ಯವಾಗುತ್ತದೆ. ಇದರ ಉಪಯೋಗದ ಕುರಿತು ಈ ವ್ಯಾಖ್ಯಾನದಲ್ಲಿ ಒಂದು ಸತ್ಯವನ್ನು ಗಮನಿಸುತ್ತೇವೆ. ಕೆಲವರು ಪ್ರಾಸ್‌ಟಾಟಿಸ್ ಎಂಬ (ರೋಮಾಪುರ 16:2ರಲ್ಲಿ) ಇರುವ ಪದವು "ಸುಕ್ಕೊರ್ಕೆರ್" KJVಎಂದು ತರ್ಜುಮೆಯಾಗಿದೆ ಎನ್ನುತ್ತಾರೆ. ಅಥವಾ ಇದನ್ನು ಇಲ್ಲಿ "ಸಹಾಯಕ" NASB ಎಂದು ತಿಳಿಸಿ, ಅವಳು, ನೋಡಿಕೊಳ್ಳುವ ಕೆಲಸವನ್ನು ಮಾಡಿದಳು ಎಂಬ ಯೋಚನೆಯನ್ನು ನೀಡುತ್ತಾರೆ. *ಪ್ರಾಸ್‌ಟಾಟಿಸ್* ಎಂಬ ಪದವು ಹೊಸ ಒಡಂಬಡಿಕೆಯ ಈ ಭಾಗದಲ್ಲಿ ಮಾತ್ರ ಗೋಚರಿಸಿರುವದರಿಂದ ಅದರ ಅರ್ಥವನ್ನು ಗ್ರಹಿಸಲು ಬೇರೆ ಯಾವ ಆದಾರವು ಇರುವದಿಲ್ಲ. ಸಾಮಾನ್ಯವಾದ ಪ್ರಯೋಗವು ನಿರ್ಣಾಯಕವಾಗಲಾರದು. ಆದರೆ ಅಪದಕ್ಕೆ "ಆಳುವದು" ಮತ್ತು "ಆಡಳಿತ" ಮಾಡುವುದು ಎಂಬುದಾಗಿದೆ. ಇದನ್ನು "ಸೇವೆ" ಅಥವಾ "ಪೋಷಣೆ" ಎಂದು ಪದಕ್ಕೆ ಸಂಬಂಧಪಡಿಸಲಾಗಿದೆ. ಆದುದರಿಂದ ಇದನ್ನು "ಸಹಾಯಕ" ಎಂದು ಸಾರ್ವತ್ರಿಕವಾಗಿ ಅನುವಾದಮಾಡಲಾಗಿದೆ. ಅಥವಾ "ನಿರ್ವಾಹಕ" ಮತ್ತು "ಆಳುವ" ಎಂಬ ಪದಕ್ಕೆ ಸರಿಸಮಾನವಾದ ಪದಗಳನ್ನು ಉಪಯೋಗಿಸಿದ್ದಾರೆ.

ಫೊಯಿಬೆಯು *ಪ್ರಾಸ್‌ಟಾಟಿಸ್* ಆಗಿದ್ದಳು ಎಂದು ಪೌಲನು ತಿಳಿಸುತ್ತಾನೆ. "ಆಕೆಯು ನನಗೂ ಅನೇಕರಿಗೂ ಸಹಾಯ ಮಾಡಿದವಳು" (ರೋಮಾಪುರ 16:2ರಲ್ಲಿ) ನೋಡುತ್ತೇವೆ. ಒಂದು ವೇಳೆ *ಪ್ರಾಸ್‌ಟಾಟಿಸ್* ಅರ್ಥ "ಆಳುವದು" ಎಂಬುದಾಗಿದ್ದರೆ. ಅಥವಾ "ಆಡಳಿತ" ಎಂಬುದಾಗಿದ್ದರೆ, ಈಕೆಯು ಪೌಲನ ಮೇಲೆ ಅಧಿಕಾರ ಚಲಾಯಿಸಿದಳು ಎಂದು ಕೆಲವರು ಹೇಳಬಹುದು. ಆದರೆ "ಪಾಟ್ರೋನೆಸ್" "ಸಹಾಯಕಿ" ಎಂಬ ವಾಕ್ಯ ದಲ್ಲಿರುವ ಪದವು ಪೌಲನು ಮತ್ತು ಅವನ ಸಹಚರರೊಂದಿಗಿದ್ದ ಅವಳ ಉತ್ತಮವಾದ ಸಂಬಂಧದ ಕುರಿತು ಅರ್ಥವನ್ನು ನೀಡುತ್ತದೆ. ಸಭೆಯಲ್ಲಿ ಫೊಯಿಬೆಯ ಮುಖ್ಯವಾದ ಪಾತ್ರವನ್ನು ವಹಿಸಿದ್ದಳು ಎಂಬುದಕ್ಕೆ ಸಾಕ್ಷಿಗಳಿರುವದಿಲ್ಲ. ಸೈದಾಂತಿಕ ವಿಷಯಗಳನ್ನು ಅರ್ಥವನ್ನು ನೀಡಿದ ವಾಕ್ಯಗಳ ಮೂಲಕವಾಗಿ ಪರಿಹರಿಸಬಾರದು.

ಫೊಯಿಬೆಯ ಕುರಿತು ಬೈಬಲ್ ವಿಸ್ತಾರವಾದ ಹಿನ್ನೆಲೆಯುಳ್ಳ ಆಕೆಯ ಪಾತ್ರವನ್ನು ತಿಳಿಸುತ್ತದೆಯೇ? ಕೆಲವರು 1 ತಿಮೊಥೆ 3:11 ವಾಕ್ಯದ ಆಧಾರದಿಂದ ಆದಿ ಸಭೆಯಲ್ಲಿ ಸಭಾ ಪಾಲನೆಯ ಆಡಳಿತವಿತ್ತು ಎಂದು ಸಿದ್ಧಾಂತ ಪಡಿಸುತ್ತಾರೆ. ಈ ಆಡಳಿತವು ಇದ್ದದ್ದರಿಂದ, ಫೊಯಿಬೆಯು ಈ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸಿರ ಬಹುದು ಎಂದು ಕೆಲವರು ಹೇಳು ತ್ತಾರೆ. ಆದಿ ಸಭೆಯಲ್ಲಿ ಪಾಲನೆಯ ಕೆಲಸಕ್ಕಾಗಿ ಫೋಯಿಬೆಯನ್ನು ನೇಮಿಸಿರಬಹುದು, ಆದರೆ ಸನ್ನಿಹವಾಗುವದಿಲ್ಲ. 1 ತಿಮೊಥೆ 3:11ರಲ್ಲಿ ಸಾಕಷ್ಟು ಪ್ರಶ್ನೆಗಳು ಉದ್ಭವಿಸುತ್ತವೆ. ಆದರೆ ಆ ವಾಕ್ಯದಿಂದ ನಿರ್ವಿವಾದ ನಿರ್ಣಯವನ್ನು ಮಾಡಲು ಅಸಾಧ್ಯ. *ಗುನೆ* ಎಂಬ ಪದವು ತರ್ಜುಮೆಗೊಂಡು "ಹೆಂಡತಿಯರು" ಅಥವಾ "ಸ್ತ್ರೀಯರು" ಎಂಬ ಅರ್ಥವು, ಸಭಾಸೇವಕರ ಅಥವಾ ಸಭಾಹಿರಿಯರ ಹೆಂಡತಿಯರು ಎಂಬುದಾಗಿಯೂ ಇರಬಹುದು. ಅಥವಾ ಸಭಾಸೇವಕಿಯರು ಎಂಬುದಾಗಿ ಇರಬಹುದು. ಸ್ತ್ರೀಯರು ಅಳುವಂತಹ ಸಾಮರ್ಥ್ಯ ಹೊಂದಿದ್ದರು ಎಂದು ಹೊಸ ಒಡಂಬಡಿಕೆಯಲ್ಲಿ ಎಲ್ಲಿಯೂ ದಾಖಲಾಗದೆ ಇರುವದರಿಂದ, ನಾವು ಎಚ್ಚರವುಳ್ಳವರಾಗಿ, ಫೋಯಿಭೆಯು ಸಭಾಸೇವಕಿಯಾಗಿದ್ದಳು ಮತ್ತು ಸಭೆಯಲ್ಲಿ ಸಭಾಸೇವಕಿಯರ ಸೇವೆಯ ಕುರಿತಾದ ಶಾಸ್ತ್ರಾಂಧತೆಯು ಉಂಟಾಗಬಾರದು, ಎಂದು ತಿಳಿಯಬೇಕು.

ಸಭಾಸೇವಕಿಯರ ಸೇವೆಯು ಇರುವದಾಗಿದ್ದರೂ, ಸ್ತ್ರೀಯರು ಆದಿಸಭೆಯಲ್ಲಿ ಆಡಳಿತ ಮಾಡಿದರು ಎಂದು ತಿಳಿಯಬಾರದು. ಇತರರು ಸಂದೇಹಿಸುವಂತೆ ಸ್ತ್ರೀಯರು ಎಲ್ಲಾ ಕೆಲಸಗಳನ್ನು ಮಾಡುತ್ತಿದ್ದರು ಎಂಬುದಕ್ಕೆ ಸಾಕ್ಷಾಧಾರಗಳಿಲ್ಲ. ಮತ್ತು ಈ ದಿನಗಳಲ್ಲಿ ಸ್ತ್ರೀಯರಿಗೆ ನೀಡಿರುವ ಎಲ್ಲಾ ಪಾತ್ರಗಳನ್ನು ಸಹ ಒಪ್ಪುವದಿಲ್ಲ. ಹೊಸ ಒಡಂಬಡಿಕೆಯಲ್ಲಿ, ದೊರೆಯುವ ಎಲ್ಲಾ ಸಾಕ್ಷ್ಯಾಧಾರಗಳು, ಸಭಾಪಾಲಕಿಯರ ಪಾತ್ರಗಳು ಮತ್ತು ಜವಾ ಬ್ದಾರಿಗಳು, ಆ ಪದದ ಅರ್ಥಕ್ಕೆನುಗುಣವಾಗಿ, ಇತರರಿಂದ ಅವರಿಗೆ ನೀಡಲ್ಪಟ್ಟಿತು ಎಂಬುದಾಗಿದೆ. *ಡಯಕೋನೋಸ್* ಅಂದರೆ ಅರಸನ ಆಜ್ಞೆಗಳನ್ನು ಪಾಲಿಸುತ್ತಿದ್ದ ಸೇವಕರು ಎಂಬ ಅರ್ಥಕ್ಕೆ ಈ ಪದವನ್ನು ಉಪಯೋಗಿಸಲಾಗಿದೆ (ಮತ್ತಾಯ 22:13), ಯೋಹಾನ 2:5, 9ರಲ್ಲಿ ಯೇಸುವನ್ನು ಹಿಂಬಾಲಿಸಿರಿ ಎಂದು ಮರಿಯಳು ಸೇವಕರಿಗೆ ಸೂಚನೆ ನೀಡಿದ ಹಾಗೆ. ಯೇಸುವಿನ ಚಿತ್ತಕ್ಕೂ ಮತ್ತು (ಯೋಹಾನ 12:26), ದೇವರ ಪ್ರತಿನಿದಿಗಳಾಗಿ ಸರ್ಕಾರಿ ನೌಕರಿಯಲ್ಲಿರುವವರಿಗೂ *ಡಯಕೋನೋಸ್* ಎಂಬ ಪದವು ಅನ್ವಹಿಸುತ್ತದೆ (ರೋಮಾಪುರ 13:4). ಹೊಸ ಒಡಂಬಡಿಕೆಯ ಬೋಧಕರಾಗಿ ಯೇಸುವಿನ ಚಿತ್ತವನ್ನು ನೆರವೇರಿಸಿದ ಅಪೊಸ್ತಲರಿಗೂ ಅನ್ವಹಿಸುತ್ತದೆ (2 ಕೊರಿಂಥ 3:6; 6:4). ಇದು ಕ್ರಿಸ್ತ ವಿರೋಧಿಯ ಬೋಧ ಕರಿಗೂ ಅನ್ವಹಿಸುತ್ತದೆ (2 ಕೊರಿಂಥ 11:15), ಮತ್ತು ಯೇಸು ತಿಳಿಸಿದ ಮಾತನ್ನೆ ಬೋಧಿ ಸಿದ ಪೌಲನಿಗೂ ಅನ್ವಹಿಸುತ್ತದೆ (1 ಕೊರಿಂಥ 3:5; 11:23; ಎಫೆಸ 3:7; ಕೊಲೊಸ್ಸೆ 1:23, 25).

ಅಧಿಕಾರದಲ್ಲಿಲದವರ ಅಪ್ಪಣೆಗಳನ್ನು ಕಾರ್ಯಗತ ಮಾಡಿರುವವರಿಗೆ *ಡಯಾಕೋ ನೊನ್* ಪದವು ಉಪಯೋಗಿಸಲ್ಪಟ್ಟಿದೆ. ಅವನು ಅಪ್ಪಣೆಕೊಡುವವನಾಗಲೀ ಅಥವಾ ನಿರ್ದಾರವನ್ನು - ತೆಗೆದುಕೊಳ್ಳುವ ಸ್ಥಾನದಲ್ಲಿಯಾಗಲೀ ಇರುವದಿಲ್ಲ. ಫೊಯಿಬೆಯು ಸಭಾಪಾಲಕಳಾಗಿದ್ದರೆ, ಕೆಂಕ್ರೆಯ ಸಭಿಕರ ಮೇಲೆ ಯಾವುದೇ ವಿಧವಾದ ಅಧಿಕಾರವನ್ನು ನಡೆಸುವ ಸ್ಥಾನದಲ್ಲಿರಲಿಲ್ಲ ಆಕೆ ಏನೇ ಆಗಿದ್ದರೂ, ಇತರರ ಅಧಿಕಾರಕ್ಕೆ ಒಳಗಾಗಿ, ಅವರು ನಿರ್ಣಯಿಸಿದ ಕಾರ್ಯಗಳನ್ನು ಮಾತ್ರ ಕಾರ್ಯಗತ ಮಾಡಿದ್ದಳು.

---

ಟಿಪ್ಪಣಿ

[1](ರೋಮಾಪುರ 16:1)ರಲ್ಲಿ ಇರುವ *ಡಯಾಕೋನಸ್* ಎಂಬ ಪದವು ತರ್ಜುಮೆಗೊಂಡು "ಸೇ ವಕ" ಅಥವಾ "ದೇವರ ಸೇವಕಿ" ಎಂದು, ಗ್ರೀಕ್ ಪದವಾದ *ಡಯಾಕೋನಿಸ್* ಕ್ರಿಯಾ ಪದದ

ಮೂಲವನ್ನು ಹೊಂದಿರುತ್ತದೆ. "ಸೇವೆ" ಎಂಬ ಪದವು *ಡವ್‌ಲೀಯೋ* ಎಂಬುದಾಗಿ ಇರುವದಿಲ್ಲ (ಅಂದರೆ ಗುಲಾಮ) *ತೆರಾಫಿಯೋ* ಅಂದರೆ (ಇಷ್ಟದಿಂದ ಸೇವೆ ಮಾಡುವದು), *ಲ್ಯಾಟ್ರಿಯೋ* ಅಂದರೆ (ಹಣಕ್ಕಾಗಿ ಸೇವೆ) *ಲೈಟರ್‌ಜಿಯೋ* ಅಂದರೆ (ಸಾರ್ವಜನಿಕ ಸೇವೆ) ಅದರಲ್ಲಿ ವಯಕ್ತಿಕ ಸೇವೆಯೂ ಸೇರಿರುತ್ತದೆ." H. W. Beyer, *"diakonos,"* in *Theological Dictionary of the New Testament,* ed. Gerhard Kittel and Gerhard Fredrich, trans. and abr. Geoffrey W. Bromily (Grand Rapids, Mich.: Wm. B. Eerdmans Publishing Co., 1986), 152.

---

## ಬೈಬಲಿನಲ್ಲಿರುವ ಪ್ರಸಿದ್ಧಿಯಾದ ಸ್ತ್ರೀಯರು

ಬೈಬಲಿನಲ್ಲಿ ಗೌರವಾನ್ವಿತ, ಪ್ರಸಿದ್ಧಿಪಡೆದ ಹಾಗೂ ವಿವೇಕಿಗಳಾದ ಸ್ತ್ರೀಯರ ಕುರಿತು ತಿಳಿಸಲಾಗಿದೆ. ನೀಚನು, ಹೀನನು ಆದ ನಾಬಾಲನ, ಹೆಂಡತಿಯಾದ ಅಬೀಗೈಲಳ ವಿವೇಕ, ಹಾಗೂ ಜ್ಞಾನವನ್ನು ನೋಡುತ್ತೇವೆ (1 ಸಮುವೇಲ 25:2-42). "ಆಗ ದಾವೀದನು ಅಬೀ ಗೈಲಳಿಗೆ - ಈ ಹೊತ್ತು ನನ್ನನ್ನು ಎದುರುಗೊಳ್ಳುವದಕ್ಕಾಗಿ ನಿನ್ನನ್ನು ಕಳುಹಿಸಿದ ಇಸ್ರಾ ಯೇಲ್ ದೇವರಾದ ಕರ್ತನಿಗೆ ಸ್ತೋತ್ರ. ಸ್ವಹಸ್ತದಿಂದ ಮುಯ್ಯಿ ತೀರಿಸಿ ರಕ್ತಾಪರಾದಕ್ಕೆ ಗುರಿಯಾಗದಂತೆ ನನ್ನನ್ನು ತಡೆದ ನೀನೂ ನಿನ್ನ ಬುದ್ಧಿಯು ಸ್ತೋತ್ರಾರ್ಹವೆಸರಿ" (ವಚನ 32, 33). ಹಾಗೂ ಬೈಬಲ್ ತಾಮಾರಳ ಮುಗ್ದತೆ ಮತ್ತು ಶುದ್ಧತೆ ಹಾಗೂ ಅವಳ ಸಹೋದ ರ ನಾದ, ಅಮ್ನೋನನ ಸ್ವಾರ್ಥದ ದುರಾಶೆಯ ಬಗ್ಗೆಯೂ ತಿಳಿಸುತ್ತದೆ (2 ಸಮುವೇಲ 13:1-19). ಒಳ್ಳೆಯ ಹಾಗೂ ವಿವೇಕಿಗಳಾದ ಸ್ತ್ರೀಯರ ಮತ್ತು ದೈವ ಭಕ್ತಿಯಿಲ್ಲದ ಮೂರ್ಖ ಪುರುಷರ ಮಧ್ಯದಲ್ಲಿರುವ ವ್ಯತ್ಯಾಸವನ್ನು ಯಾವ ರೀತಿಯಲ್ಲಿ ವಿವರಿಸೋಣ?

ಅಬ್ಷಾಲೋಮನ ಪರವಾಗಿ ದಾವೀದನೊಂದಿಗೆ ಸಂಧಾನ ಮಾಡಲು ಯೋವಾಬನು, ಪುರುಷರನ್ನು ಆಯ್ಕೆ ಮಾಡಿಕೊಳ್ಳದೆ, ತೆಕೋವದ ಸ್ತ್ರೀಯನ್ನು ಆಯ್ಕೆಮಾಡಿಕೊಂಡನು (2 ಸಮುವೇಲ 14:1-20). ಅದೇ ರೀತಿಯಾಗಿ ಸೊಲೋಮೋನನ ಕುರಿತಾಗಿ ಮಾತನಾಡಲು, ನಾತಾನನು ಬೆತ್ಷೆಬಳನ್ನು ಕಳುಹಿಸಿದನು (1 ಅರಸು 1:11-31).

ಬೈಬಲಿನಲ್ಲಿ, ಸ್ತ್ರೀಯರ ಕೆಟ್ಟ ಹಾಗೂ ಒಳ್ಳೆಯ ವರ್ಚಸ್ಸಿನ ಪರಿಣಾಮದ ಕುರಿತು ನೋಡು ತ್ತೇವೆ. ಯೆಹೋಷೆಬಳೆಂಬಾಕೆಯು ಯಾರಿಗೂ ತಿಳಿಯದಂತೆ ತನ್ನ ಅಣ್ಣನ ಮಗನಾದ ಯೆಹೋವಾಷನನ್ನು ಹತವಾಗುವದಕ್ಕಿದ್ದ ರಾಜಪುತ್ರರ ಮದ್ಯದಿಂದ ಅವನ ದಾದಿಯೊಡನೆ ತೆಗೆದು ಕೊಂಡುಹೋಗಿ ಮಲಗುವ ಕೋಣೆಯೊಳಗೆ ಅಡಗಿಸಿಟ್ಟಳು. ಹೀಗೆ ಅವನು ಅತಲ್ಯಳಿಂದ ಹತವಾಗದಂತೆ ತಪ್ಪಿಸಲ್ಪಟ್ಟು ಆರು ವರುಷಗಳವರೆಗೂ ಯೆಹೋಷೆಬಳೊಡನೆ ಗುಪ್ತವಾಗಿ ಕರ್ತನ ಆಲಯದಲ್ಲಿದ್ದನು (2 ಅರಸು 11:1-3). ಹಾಮಾನನು ರಹಸ್ಯವಾದ ಒಳಸಂಚಿನಿಂದ, ಇಸ್ರಾಯೇಲ್ಯರನ್ನು ನಿರ್ನಾಮ ಮಾಡಬೇಕೆಂದು ನಿರ್ಮಿಸಿದ ಯೋಜನೆ ಯನ್ನು ನಿರ್ನಾಮ ಮಾಡಲು ಸುಂದರಳೂ, ಶೂರಳು ಆದ ಎಸ್ತೇರ್‌ರಾಣಿಯನ್ನು ದೇವರು ಉಪಯೋಗಿಸಿದನು (ಎಸ್ತೆರ್ 4-8).

ಸ್ತ್ರೀಯರ ಸಹವಾಸದಿಂದ ಸಂಸೋನನು ನಾಶವಾದನು (ನ್ಯಾಯಸ್ಥಾಪಕ 14-16). ಸ್ತ್ರೀಯರ ದೆಸೆಯಿಂದ ಸೊಲೋಮೋನನಿಗೂ ಕೆಟ್ಟ ಪರಿಣಾಮ ಉಂಟಾಯಿತು (1 ಅರಸು 11:1-4). ಆಹಾಬನ ನಾಶವು ಈಜೆಬೆಲಳಿಂದ ಉಂಟಾಯಿತು (2 ಸಮು ವೇಲ 11:2-27). ಬೆತ್ಷೆಬಳ ಸುಂದರವಾದ ದೇಹದ ನಿಮಿತ್ತ ದಾವೀದನು ಶೋಧನೆಗೆ ಒಳಗಾಗಿ ವ್ಯಭಿಚಾರಮಾಡಿದನು, ಮತ್ತು ಈ ಕಾರ್ಯದ ನಿಮಿತ್ತ ದಾವೀದನು ಕೊಲೆಗಾರನಾದನು (1 ಅರಸುಗಳು 21:1-26).

ದಾವೀದನು ಯೆರುಸಲೇಮಿಗೆ ಗೂಡಾಚಾರರನ್ನು ಕಳುಹಿಸಿದಾಗ, ಕೆಲವು ಹೆಸರೇ ಇಲ್ಲದ ಸ್ತ್ರೀಯರು ಅವರನ್ನು ಕಾಪಾಡಿದರು (2 ಸಮುವೇಲ 17:17-21). ಇನ್ನೊಬ್ಬ ವಿವೇಕಿ ಮತ್ತು ಹೆಸರಿಲ್ಲದ ಸ್ತ್ರೀಯು ಶೆಬನ ತಲೆಯನ್ನು ಕತ್ತರಿಸಿ ಯೋವಾಬನಿಗೆ ನೀಡುವ ಮೂಲಕ,

ಯೋವಾಬನ ಕೈಯಿಂದ ಯೆರೂಸಲೇಮಿನ ನಾಶನವನ್ನು ತಪ್ಪಿಸಿದಳು (2 ಸಮುವೇಲ 20:16-22). ಇದರಿಂದ ದಾವೀದನ ವೈರತ್ವವನ್ನು ಅಂತ್ಯಮಾಡಿದಳು.

ಅನೇಕ ಸ್ತ್ರೀಯರು, ಇತರರ ಸೇವೆ ಮಾಡುವ ಮೂಲಕವಾಗಿ ತಾವು ದೊಡ್ಡ ಸೇವಕಿಯರು ಎಂದು ಕಾಣಿಸಿಕೊಂಡಿದ್ದಾರೆ. ಒಬ್ಬ ಸ್ತ್ರೀ ಎಲೀಯನಿಗೆ ಆಹಾರವನ್ನೂ ನೀಡಿದಳು (1 ಅರಸು 17:9-15). ಒಬ್ಬ ಕುಲೀನ ಸ್ತ್ರೀಯು ಎಲೀಷನಿಗೆ ಆಹಾರವನ್ನು ತಂದಳು ಕೊಠಡಿಯನ್ನು ನೀಡಿದಳು (2 ಅರಸು 4:8-10). ಇನ್ನೂ ವಿವಿಧವಾದ ಸ್ತ್ರೀಯರು ತಮ್ಮ ಸ್ವಂತ ಖರ್ಚಿನಿಂದ ಯೇಸುವಿನ ಹಾಗೂ ಅಪೊಸ್ತಲರ ಕೊರತೆಗ ಳನ್ನು ನೀಗಿಸಿದರು (ಲೂಕ 8:1-3; ಮತ್ತಾಯ 27:55; ಮಾರ್ಕ 15:41). ಅವರಲ್ಲಿ ಮಾರ್ಥ ಮತ್ತು ಮರಿಯಳೂ ಒಳಗೊಂಡಿದ್ದಾರೆ (ಲೂಕ 10:38-42; ಯೋಹಾನ 12:2). ಯಾರು ಅರಿಯದ ಸಮಾರ್ಯದ ಸ್ತ್ರೀಯು, ಯಾಕೋಬನು ತೋಡಿಸಿದ ಬಾವಿಯ ಉದಾಹರಣೆಯಿಂದ ಆರಾಧನೆಯ ಸತ್ಯವನ್ನು ಬಹಿರಂಗ ಪಡಿಸಿ, ಯೇಸುವಿನ ವಾಕ್ಯವನ್ನು ಕೇಳಲು ಪೂರ್ಣ ಪಟ್ಟಣವನ್ನೇ ಆತನ ಬಳಿಗೆ ತಂದಳು (ಯೋಹಾನ 4:21-42ಃ). ಯೇಸು ಮರಣವನ್ನು ಅನುಭವಿಸುವದಕ್ಕಿಂತ ಮೊದಲು ಒಬ್ಬ ಸ್ತ್ರೀಯು ಆತನನ್ನು ಅಭಿಷೇ ಕಿಸಿದಳು (ಮತ್ತಾಯ 26:7-13). ಯೇಸುವಿನ ಕ್ರೂಜೆಯ ಸಮಯದಲ್ಲಿ (ಯೋಹಾನ 19:25; ಲೂಕ 23:49), ಅನೇಕ ಸ್ತ್ರೀಯರು ಅಂದರೆ, ಆತನ ತಾಯಿಯಾದ ಮರಿಯಳು, ಮತ್ತು ಇತರ ಸ್ತ್ರೀಯರು ಧೈರ್ಯವಾಗಿ ಯೇಸುವಿನ ಬಳಿಯಲ್ಲೇ ಇದ್ದರು. ಆದರೆ ಪುರುಷ ಹಿಂಬಾಲಕರು ಯೇಸುವನ್ನು ತೊರೆದು ಓಡಿ ಹೋದರು, ಮತ್ತು ಆಯುಧದಾರಿಗಳಾದ ಸೈನಿಕರು ಯೇಸುವನ್ನು ಸಮೀಪಿಸಿದಾಗ, ಆತನಿಂದ ಆರಿಸಲ್ಪಟ್ಟಂತಹ ಅಪೊಸ್ತಲರೂ ಸಹ, ಭಯದಿಂದ ಓಡಿಹೋದರು (ಮತ್ತಾಯ 26:56).

ಈಗಾಗಲೇ ತಿಳಿಸಲ್ಪಟ್ಟಿರುವ ಗೌರವವುಳ್ಳ ಹಾಗೂ ವರ್ಚಸ್ಸಿನಿಂದ ಕೂಡಿದ ಸ್ತ್ರೀಯರ ಕುರಿತಾಗಿ, ಜ್ಞಾನೋಕ್ತಿಗಳಲ್ಲಿ ವಿವರಿಸಲಾಗಿದೆ 31:10-31. ಈ ರೀತಿಯ ಸ್ವಭಾವದ ಸ್ತ್ರೀಯರು ದೇವರ ಮಹಾಸೇವಕಿಯರಾಗಿ ಹೊರಹೊಮ್ಮಿದರು. ಅವರ ನಾಯಕತ್ವದಲ್ಲಿ ಇರದ, ಪ್ರಭಾವವು ಅವರ ಸೇವೆಯಲ್ಲಿ ಕಾಣಿಸಿತು. ಅವರು ತೋರಿದ ಸೇವೆಯ ಮೂಲಕ ವಾಗಿ, ಅವರು ಅಧಿಕಾರಿಗಳಿಗಿಂತಲೂ, ಅರಸರಿಗಿಂತಲೂ, ಆಡಳಿತಗಾರರಿಗಿಂತಲೂ ರಾಜ ಕುಮಾರರಿಗಿಂತಲೂ, ಉನ್ನತ ಮಟ್ಟದಲ್ಲಿ ಕಾಣಿಸಿಕೊಂಡರು. ಸ್ನಾನಿಕನಾದ ಯೋಹಾನನ ಮಟ್ಟಕ್ಕೆ ಅವರನ್ನು ಪರಿಗಣಿಸಲಾಗಿದೆ (ಮತ್ತಾಯ 20:25-28), (ಮತ್ತಾಯ 11:11), ಮತ್ತು ಅವರನ್ನು ಯೇಸುವಿನ ಸಾರೂಪ್ಯಕ್ಕೆ ಹೋಲಿಸಲಾಗಿದೆ (ಮತ್ತಾಯ 20:28).

ಯೇಸುವಿನ ಬೋಧನೆಯ ಮಾರ್ಗದಲ್ಲಿರುವ ಪುರುಷರಾಗಲೀ, ಸ್ತ್ರೀಯರಾಗಲೀ, ಸೇವೆ ಮಾಡುವವರಾಗಿದ್ದರೆ, ಅವರು ಪ್ರಭುತ್ವಕ್ಕಿಂತಲೂ ಉನ್ನತ ಮಟ್ಟವನ್ನು ಹೊಂದಿದವ ರಾಗಿದ್ದಾರೆ. ಸಹಾಯ ಮಾಡುವಂತಹ ಸೇವಕರಾಗಿರುವುದೇ ಅವರ ಗುರಿಯಾಗಿರಬೇಕು. ಬೈಬಲಿನಲ್ಲಿರುವ ಸ್ತ್ರೀಯರು, ಕೆಲವರ ದೃಷ್ಟಿಗೆ ಅರಸರಂತೆ ದೊರೆತನ ಮಾಡುವವರಂತೆ, ಉನ್ನತರಾಗಿ ಕಾಣಿಸದೆ ಹೋದರೂ, ಅವರ ಕಾರ್ಯಗಳ ಪರಿಣಾಮದ ಮೂಲಕ ಅವರ ಪ್ರಭಾವವನ್ನು ಅರಿಯಬಹುದು. ಈ ರೀತಿಯಾದ ಸ್ತ್ರೀಯರನ್ನು ದೇವರು ನಮಗೆ ಹೆಚ್ಚಾಗಿ ನೀಡಲಿ.

ಯೇಸುವಿನ ತಾಯಿಯಾದ ಮರಿಯಳು, ಪ್ರಭಾವದಿಂದ ತುಂಬಿದ ಸ್ತ್ರೀಯರಿಗೆ ಹೋಲಿಕೆ ಯಾಗಿದ್ದಾಳೆ. ದೇವರ ದೀನತೆಯ ಸೇವೆಗೆ ತನ್ನನ್ನು ಒಪ್ಪಿಸಿಕೊಟ್ಟಿದ್ದಳು. ದೇವರು ಆಕೆಯ ಬಲಹೀನ ದೇಹವನ್ನು, ಯೇಸುವಿನ ಜನನದ ಪಾತ್ರೆಯಾಗಿ ಉಪಯೋಗಿಸುವನು ಎಂದು ದೇವದೂತನು ಆಕೆಗೆ ತಿಳಿಸಿದಾಗ, ಅವಳ ಗೌರವದ ಪ್ರತಿಕ್ರಿಯೆಯು “ಇಗೋ, ನಾನು ಕರ್ತನ ದಾಸಿ; ನಿನ್ನ ಮಾತಿನಂತೆ ನನಗಾಗಲಿ ಎಂದು ಗೌರವದಿಂದ ಉತ್ತರಿಸಿದಳು” (ಲೂಕ 1:38).

ಯೇಸು ತನ್ನ ಬಾಲ್ಯವಸ್ಥೆಯಲ್ಲಿ, ಈ ಸ್ತ್ರೀಗೆ ವಿಧೇಯನಾಗಿದ್ದನು: ಮತ್ತು ಆತನ ತಾಯಿಯಾದ ಮರಿಯಳಿಗೂ, ಮತ್ತು ಯೋಸೇಫನಿಗೂ ಅಧೀನನಾಗಿದ್ದನು. "ಬಳಿಕ ಆತನು ಅವರ ಜೊತೆಯಲ್ಲಿ ನಜರೇತಿಗೆ ಬಂದು ಅವರಿಗೆ ಅಧೀನನಾಗಿದ್ದನು" (ಲೂಕ 2:51). ಆತನು ಅವರಂತೆ ತಿಳುವಳಿಕೆಯನ್ನೂ, ಸಾಮರ್ಥ್ಯವನ್ನೂ, ಅಥವಾ ಅವರ ಇತರೆ ಸಂಗತಿಗಳಿಗಿಂತಲೂ ಈತನು ಕೆಳಮಟ್ಟದಲ್ಲಿದ್ದನು ಎಂದು ತಿಳಿದು ಅವರಿಗೆ ಅಧೀನನಾಗಿರದೆ, ಅವರು ಈತನ ತಂದೆ ತಾಯಿಗಳಾಗಿ ಅಧಿಕಾರ ಹೊಂದಿದ ಸ್ಥಾನವನ್ನು ಹೊಂದಿದ್ದರಿಂದ, ಅವರಿಗೆ ಅಧೀನನಾಗಿದ್ದನು, ಅಧೀನತೆಯು ಕೆಳಮಟ್ಟದ ಸಂಗತಿ ಎಂದು ತಿಳಿಯಬಾರದು.

ಆತನು ಹದಿನೆಂಟು ವರುಷದವನಾದಾಗ, ತನ್ನ ತಾಯಿಯ ಅನುಮತಿಯನ್ನು ಪಡೆದುಕೊಂಡು, ನಾಯಕಸ್ಥಾನದ ಪಾತ್ರವನ್ನು ಸ್ವೀಕರಿಸಿದನು. ಕಾನಾ ಊರಿನ ಮದುವೆ ಯಲ್ಲಿ ದ್ರಾಕ್ಷಾರಸವು ಮುಗಿದು ಹೋಗಿದೆ ಎಂದು ಮರಿಯಳು ತಿಳಿಸಲು ಇದಕ್ಕೆ ಯೇಸು ಪ್ರತಿಕ್ರಿಯಿಸಿ, "ಸ್ತ್ರೀಯೇ ನನ್ನಗೊಡವೆ ನಿನಗೇಕೆ? ನನ್ನ ಸಮಯವು ಇನ್ನೂ ಬಂದಿಲ್ಲ ಎಂದು ಹೇಳಿದನು" (ಯೋಹಾನ 2:4; NKJV). ಮತ್ತು ಆಕೆ ಮುಂದುವರಿದು, ಯೇಸುವಿನ ಕೈಗಳಿಂದಲೇ ಆ ಸಮಸ್ಯೆಯನ್ನು ಪರಿಹರಿಸಲು, ಅಲ್ಲಿದ್ದ ಸೇವಕರಿಗೆ "... ಆತನು ನಿಮಗೆ ಏನು ಹೇಳುತ್ತಾನೋ, ಅದನ್ನು ಮಾಡಿರಿ ಅಂದಳು" (ಯೋಹಾನ 2:5). ಅಂದಿನಿಂದ ಯೇಸು ತನ್ನ ತಾಯಿಯ ಸಂಬಂಧದಲ್ಲಿದ್ದ ಅಧಿಕಾರವನ್ನು ತನ್ನಲ್ಲೆ ಉಳಿಸಿಕೊಂಡನು.

ಮರಿಯಳನ್ನು ದೇವರ ಮಹಾಸೇವಕಿಯೆಂದು ತಿಳಿಯುವಾಗಲೂ, ನಮ್ಮ ರಕ್ಷಕನಾದ ಯೇಸು ಆಕೆಯ ದೇಹದ ಮೂಲಕವಾಗಿ ಹಾದು ಲೋಕಕ್ಕೆ ಪ್ರವೇಶಿಸಿದರೂ, ಮತ್ತು ಸ್ತ್ರೀಯ ದೇಹವಾಗಿದ್ದರೂ ಸಹ, ಆತನು ಪುರುಷರ ದೇಹವನ್ನೇ ಹೊಂದಿದ್ದನು ಎಂದು ನಾವು ಮರೆ ಯಬಾರದು (ಗಲಾತ್ಯ 4:4). ದೇವರು ಮನುಷ್ಯನಲ್ಲದಿದ್ದರೂ ಆತನು ಪುರುಷರ ದೇಹವನ್ನೆ ಆರಿಸಿಕೊಂಡನು. ಆ ದೇಹವಾದ ಯೇಸು ಕ್ರಿಸ್ತನ ಮೂಲಕವಾಗಿ, ಲೋಕದ ಜನರಿಗೆ ತನ್ನನ್ನು ತಾನೇ ಪ್ರಕಟಿಸಿಕೊಂಡನು (ಯೋಹಾನ 1:18), ಮತ್ತು ಲೋಕದ ಪಾಪಕ್ಕಾಗಿ ಯಜ್ಞಾರ್ಪಿತನಾದನು (ಇಬ್ರಿಯ 10:5, 10).